



# ಬಂಡೀಪುರದ ಬೆಡಗಿನ ಹೂ

ಚಿತ್ರ– ಬರಹ:
**ಆರ್.ಕೆ.ಮಧು**



ಬಂಡೀಪುರ ಹುಲಿ ಸಂರಕ್ಷಿತ ಕೇಂದ್ರದಲ್ಲಿ ಕಣ್ಸೆಳೆವ ಬಣ್ಣದ ಹೂಗಳದ್ದೇ ಸಾಮ್ರಾಜ್ಯ. ಈ ಹೂಗಳು ಬಿರುಬೇಸಿಗೆಯಲ್ಲೇ ಅರಳುತ್ತವೆ. ಬೇಸಿಗೆಯನ್ನು ಆಹ್ವಾನಿಸಲು ಪ್ರಕೃತಿಯೇ ಕಟ್ಟಿದ ತೋರಣದಂತೆ!

ಬಂಡೀಪುರದಲ್ಲಿ ಇಳಿಯುವ ಯಾತ್ರಿಕರನ್ನು ಸ್ವಾಗತಕಾರಿಣಿಯಂತೆ ಎದುರುಗೊಳ್ಳುವುದು ಈ ಹೂಗಳೇ. ಇದು ಕೇವಲ ಯಾತ್ರಿಕರನ್ನು ಸ್ವಾಗತಿಸುವುದಲ್ಲದೇ, ಬೇಸಿಗೆಯನ್ನು ಎದುರಿಸಲು ಪ್ರಕೃತಿ ಸಿದ್ಧಗೊಳ್ಳುವುದರ ಪರಿಚಯ ಪಾಠವೂ ಹೌದು. ಬೇಸಿಗೆಯಲ್ಲಿ ಪರಿಸರ ತನ್ನನ್ನು ಅವಲಂಬಿಸಿರುವ ಜೀವಿಗಳನ್ನು ಸಾಕಿ ಸಲಹುವ ಪರಿಗೆ ಇದೊಂದು ಉದಾಹರಣೆ ಕೂಡ.

ಬೇಸಿಗೆ ಎಂದರೆ ನೀರಿಗೆ ಬರ, ಆಹಾರಕ್ಕೆ ಕೊರತೆ. ಆದರೆ ಬೇಸಿಗೆಯಲ್ಲೇ ಅರಳಿ ಬಿರಿವ ಇಂಥ ಹೂವು ಹಣ್ಣುಗಳಿಂದಾಗಿ ಪಕ್ಷಿಗಳಿಗೆ ಆಹಾರದ ಕೊರತೆ ಇಲ್ಲ. ಪ್ರಕೃತಿ ತನ್ನ ಸಹಚರರನ್ನು ರಕ್ಷಿಸುವ ಪರಿ ಇದು.

ಹಲವು ಹಕ್ಕಿಗಳಿಗೆ ಮಕರಂದವೇ ಆಹಾರವಾದ್ದರಿಂದ ಕಾಡಿನಲ್ಲಿ ಬೇಸಿಗೆಯಲ್ಲೇ ಹೂ ಬಿಡುವ ಸಸ್ಯಗಳಿವೆ. ಬರಗಾಲ ಹೊಡೆತದ ನಡುವೆಯೂ ಎಷ್ಟೋಂದು ಮರಗಳು ಹಸಿರುಟ್ಟು ನಳನಳಿಸುತ್ತವೆ. ಹೂ ಬಿಡುವ ಮರಗಳಲ್ಲದೇ ಹಣ್ಣು ಬಿಡುವ ಮರಗಳೂ ಸಾಕಷ್ಟಿವೆ.

ಬೇಸಿಗೆಯ ಬಂಡೀಪುರದಲ್ಲಿ ಹಳದಿ ವರ್ಣದ ಸುಂದರಿ ಕಕ್ಕೆ, ಕೇಸರಿ ವರ್ಣದ ಮುತ್ತುಗ (ಫ್ಲೇಮ್ ಆಫ್ ಫಾರೆಸ್ಟ್), ಗುಲಾಬಿ ವರ್ಣದ ಜವನಿಕಾ, ಕೆಂಪು ಹಳದಿ ಬಣ್ಣದ ಕತ್ತಿಕಾಯಿ ಹೂ, ಗುಲಾಬಿ ವರ್ಣದ ಕ್ಯಾಸಿಯಾ ಹೀಗೆ ಹಲವು ಹೂಗಳ ಕಾರುಬಾರು. ಇವಲ್ಲದೆ ದೇವ ಗಣಗಲೆ, ಅಂಟು ಹೂಗಳೂ ಮನಸ್ಸಿಗೆ ಮುದ ನೀಡುತ್ತವೆ. ಬಂಡೀಪುರವೆಂದರೆ ಹುಲಿ ಸಂರಕ್ಷಿತ ತಾಣ ಮಾತ್ರವಲ್ಲ, ಜೀವವೈವಿಧ್ಯದ ತಾಣವೂ ಹೌದು.